ಕರ್ನಾಟಕ ಸರ್ಕಾರ

ಸಂ:ಕಂಇ/ಭೂಸ್ವಾ-5(2)/ಸಿಆರ್-88/2017-18
637

ಆಯುಕ್ತರವರ ಕಛೇರಿ,
ಪು/ಪು & ಭೂಸ್ವಾಧೀನ, ಕೃ.ಮೇ.ಯೋ.,
ನವನಗರ, ಬಾಗಲಕೋಟೆ.
ದಿನಾಂಕ: 09-10-2020.

ಇವರಿಗೆ,

ವಿಶೇಷ ಭೂಸ್ವಾಧೀನಾಧಿಕಾರಿ,
ಕೃ.ಮೇ.ಯೋ, ಭೀಮರಾಯನಗುಡಿ.

ಮಾನ್ಯರೇ,

ವಿಷಯ:- ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013ರ ಕಲಂ 25ರಡಿ ಅವಧಿ ವಿಸ್ತರಿಸುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ.ಎಲ್.ಎ.ಕ್ಯೂ/ಎಸ್.ಆರ್-8/2016-17, ದಿನಾಂಕ: 28-08-2020.

-000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖರನ್ವಯ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಅಧಿನಿಯಮ 2013ರ ಕಲಂ 19ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 18-07-2019 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಸದರಿ ಪ್ರಕರಣದಲ್ಲಿ ಭೂಕೋರಿಕಾ ಸಂಸ್ಥೆಯಿಂದ ಭೂಸ್ವಾಧೀನ ಮತ್ತು ಪುನರವಸತಿ ಪುನರನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಠೇವಣಿ ಮಾಡದೇ ಇರುವದರಿಂದ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಲು ದಿನಾಂಕ: 17-07-2020 ರಿಂದ 18-12-2020 ರವರೆಗೆ ಹೆಚ್ಚುವರಿ ಕಾಲಾವಾಧಿಯನ್ನು ವಿಸ್ತರಿಸಲು ಕರಡು ಐತೀರ್ಪು ರಚಿಸುವದು ವಿಳಂಬವಾಗಿರುತ್ತದೆ. ಕಾರಣ ನಿಗದಿತ ಅವಧಿಯಲ್ಲಿ ಐತೀರ್ಪು ರಚಿಸಿ ಇತ್ಯರ್ಥಗೊಳಿಸುವಲ್ಲಿ ವಿಳಂಬವಾಗಿರುವದರಿಂದ ಕಲಂ 25ರಡಿ 1 ವರ್ಷದ ಅವಧಿಗೆ ಕಾಲಾವಕಾಶ ನೀಡಲು ಕೋರಿರುತ್ತೀರಿ.

ಮೇಲಿನ ಪ್ರಕರಣದಲ್ಲಿ ಜೇವರ್ಗಿ ತಾಲೂಕಿನ ಏವೂರ, ಬಳಬಟ್ಟಿ ಎಲ್‌ಎಕ್ಯೂ/ಎಸ್‌ಆರ್-8/2016-17ರ ಪ್ರಕರಣದಲ್ಲಿ ತಮ್ಮ ಕೋರಿಕೆಯನ್ನು ಪರಿಗಣಿಸಿ ಕಲಂ 25ರಡಿ ದಿನಾಂಕ: 18-12-2020 ರವರೆಗೆ ಕಾಲಾವಕಾಶ ವಿಸ್ತರಿಸಿ ಅನುಮತಿ ನೀಡಿದೆ. ಕಾಲಾವಕಾಶ ನೀಡಿರುವ ಬಗ್ಗೆ ಅಂತರ್ಜಾಲದಲ್ಲಿ ಅಪ್‌ಲೋಡ ಮಾಡಲು ಈ ಮೂಲಕ ತಿಳಿಸಿದೆ.

ತಮ್ಮ ವಿಶ್ವಾಸಿ,

| |
|---|
| ಕಛೇರಿ ಟಿಪ್ಪಣಿ ಆಯುಕ್ತರವರಿಂದ ಅನುಮೋದಿಸಲ್ಪಟ್ಟಿದೆ. |

ಆಯುಕ್ತರು,
ಪುಪು/ಭೂಸ್ವಾಧೀನ, ಕೃ.ಮೇ.ಯೋ,
ನವನಗರ, ಬಾಗಲಕೋಟೆ.
ಇವರ ಪರವಾಗಿ.

**ಪ್ರತಿಯನ್ನು:**

1) ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ, ಕೃಮೇಯೋ, ಬಾಗಲಕೋಟೆ ಇವರಿಗೆ ಮಾಹಿತಿಗಾಗಿ.
2) ಕಛೇರಿ ಕಡತಕ್ಕೆ